ಸಿ.ಸಿ. ನಂಬರಃ 234/2024

ಪಿ.ಡಬ್ಲ್ಯೂಃ 1

ದಿಃ 06-03-2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀಮತಿ ಪಿ.ಎಲ್.ಎನ್ ಇವರಿಂದಃ

ನನ್ನ ಬಳಿ ಬಿ ಪಿ ಎಲ್ ರೇಷನ್ ಕಾರ್ಡ ಇರುತ್ತದೆ. ಬಿ ಪಿ ಎಲ್ ರೇಷನ್ ಕಾರ್ಡನ್ನು ಸರಕಾರ ಕಡುಬಡವರಿಗೆ ಕೊಡುತ್ತಾರೆ ಎಂದರೆ ಸರಿ. ಆರೋಪಿತನು ನನಗೆ ಚೆಕ್ಕನ್ನು ಸಾಲ ಪಡೆಯುವ ಕಾಲಕ್ಕೆ ಕೊಟ್ಟಿರುತ್ತಾನೆ. ಒಟ್ಟು 3 ಚೆಕ್ಕುಗಳನ್ನು ಕೊಟ್ಟಿರುತ್ತಾನೆ. ಸದರಿ ವಿಷಯವನ್ನು ನಾನು ನನ್ನ ಫಿರ್ಯಾದಿ ಹಾಗೂ ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ ಎಂದರೆ ಸರಿ. ಆರೋಪಿತನು ನನ್ನ ಬಳಿ ಯಾವತ್ತು ಸಾಲ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಚೆಕ್ ಸಂಖ್ಯೆ ಗೊತ್ತಿರುವುದಿಲ್ಲ, ಆದರೆ ನಾನು ಆರೋಪಿಗೆ ದುಡ್ಡನ್ನು ಕೊಟ್ಟಿರುತ್ತೇನೆ. ಆರೋಪಿತನು ನಿವೃತ್ತ ಸರಕಾರಿ ನೌಕರನು ಇದ್ದು, ಆತನಿಗೆ ಸಾಕಷ್ಟು ಹಣ ಇದ್ದು, ಅವನಿಗೆ ನನ್ನ ಬಳಿ ಸಾಲ ಪಡೆಯುವ ಪ್ರಶ್ನೇಯೇ ಉದ್ಭವಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳ ಮೈಕ್ರೋ ಫೈನಾನ್ಸ ಸಂಸ್ದೆಯ ಮೂಲಕ ಆರೋಪಿತನ ಹೆಂಡತಿಯಿಂದ ಪಡೆದುಕೊಂಡ ರೂ. 75 ಸಾವಿರ, ರೂ.15 ಸಾವಿರ ಮತ್ತು ರೂ.25 ಸಾವಿರಗಳ ಒಟ್ಟು 3 ಚೆಕ್ಕುಗಳನ್ನು ನನ್ನ ಮಗಳು ಪಡೆದುಕೊಂಡಿದ್ದು,ಅದರ ದುರುಪಯೋಗವನ್ನು ಪಡೆದು ಈ ಸುಳ್ಳು ಪ್ರಕರಣವನ್ನು

ನಾನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತನಿಗೆ ವಕೀಲರ ಮೂಲಕ ನೀಡಿದ ನೋಟೀಸು ಸುಳ್ಳು ಮಜಪೂರಗಳಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಚೆಕ್ಕು ಮತ್ತು ಆರೋಪಿತನಿಗೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಆರೋಪಿತನ ಹೆಂಡತಿಯ ಸಾಲಕ್ಕೆ ಪಡೆದುಕೊಂಡು ಚೆಕ್ಕುಗಳನ್ನು ನಾನು ಈ ಪ್ರಕರಣದಲ್ಲಿ ದುರುಪಯೋಗಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಫಿರ್ಯಾದಿ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತಿಳಿಸಿದಂತದೆ ನಾನು ಆರೋಪಿತನ ಮಗನ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಆರೋಪಿತನು ನನ್ನಲ್ಲಿ ಯಾವುದೇ ಸಾಲ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಜೆ ಎಂ ಎಫ್ ಸಿ, ಅಂಕೋಲಾ.